ಕೇಂದ್ರಿತವಾಗಿ ಬಿಂಬಿತವಾಗಿರುವುದು ಕೂಡ ಶ್ಲಾಘನೀಯ. ವಿವಾಹವನ್ನು ಕುರಿತ ತನ್ನ ಗ್ರಹಿಕೆ ತಪ್ಪು ಎಂದು ಅರಿವಾದ ಮೇಲೆ ನೊಜೂಮ್ ವರ್ತಿಸುವ ರೀತಿಯಲ್ಲಿಯೇ ಹೋರಾಟ ಭಾವವನ್ನು ಚಿತ್ರ ಸೂಕ್ಷ್ಮವಾಗಿ ತೋರುತ್ತಾ ಹೋಗುತ್ತದೆ. ಅಲ್ಲಿಯೂ ಇರುವುದು ವಾಚ್ಯದ ಧಾಟಿಗೆ ಹೊರತಾದ ಹೆಣಿಗೆ.

ಹಳ್ಳಿಯಿಂದ ಯೆಮೆನ್‌ನ ರಾಜಧಾನಿ ಸನಾದ ಕಾಂಕ್ರೀಟ್ ಕಾಡಿನ ನಡುವೆ ಹುಡುಗಿಯ ಆರ್ತನಾದವನ್ನು ನಿರ್ದೇಶಕಿ ಅರಣ್ಯ ರೋದನವನ್ನಾಗಿಸುವುದಿಲ್ಲ. ನೊಜೂಮ್ ಹೆಸರಿಗೆ ತಕ್ಕ ಹುಡುಗಿ. ನೋಡನೋಡುತ್ತಲೇ ಮುಗ್ಧತೆಯ ಪೊರೆ ಕಳಚಿಕೊಳ್ಳುವ ಅವಳು ಇಷ್ಟವಿಲ್ಲದ ಗಂಡನಿಂದ, ಒಲ್ಲದ ಅತ್ತೆಯಿಂದ ಹೊರಬರುವ ದಾರಿಗಳನ್ನು ಹುಡುಕುತ್ತಾಳೆ. ಅದನ್ನು ಸಿನಿಮೀಯ ತರ್ಕದಲ್ಲಿಯೇ ತೋರಿರುವುದು ಖದಿಜಾ ಅಗ್ಗಳಿಕೆ.

ಟ್ಯಾಕ್ಸಿ ಹತ್ತಿ ನ್ಯಾಯಾಲಯಕ್ಕೆ ಹೋಗಿ, ಅಲ್ಲಿನ ಕಲಾಪ ಕೇಳುತ್ತಾ ಕೂತಾಗಲೂ ನೊಜೂಮ್ ಕಣ್ಣುಗಳಲ್ಲಿ ಮುಗ್ಧತೆ ತುಳುಕುತ್ತದೆ. ಮುಗ್ಧತೆಯ ಪೊರೆಯಿಂದ ಅವಳು ಬಿಡಿಸಿಕೊಂಡ ಸಂದರ್ಭ ಅದಾದರೂ ಅವಳಿಗೆ ಇಲ್ಲದ ಲೋಕಜ್ಞಾನವನ್ನು ನಿರ್ದೇಶಕಿ ಪಾತ್ರಕ್ಕೆ ದಕ್ಕಿಸಿಕೊಟ್ಟಿರುವುದು ಗಮನಾರ್ಹ. ಅಲ್ಲಿ ವಿವಾಹ ವಿಚ್ಛೇದನ ಪಡೆಯಬಹುದು ಎಂದರಿತ ಬಾಲಕಿ, ನ್ಯಾಯಾಲಯದ ಕಲಾಪ ಮುಗಿಯುವವರೆಗೆ ಕಾಯುತ್ತಾಳೆ. ಆಮೇಲೆ ನ್ಯಾಯಮೂರ್ತಿ ಒಬ್ಬರೇ ಇರುವುದನ್ನು ನೋಡಿಕೊಂಡು ಅವರಲ್ಲಿಗೆ ಹೋಗಿ, 'ನನಗೆ ವಿವಾಹ ವಿಚ್ಛೇದನ ಬೇಕು' ಎಂದು ವಿನಂತಿಸಿಕೊಳ್ಳುತ್ತಾಳೆ. ಸಿನಿಮಾ ಪ್ರಾರಂಭದಲ್ಲಿಯೇ ಈ ದೃಶ್ಯವನ್ನು ತೋರಿ, ಆಮೇಲೆ ಫ್ಲ್ಯಾಷ್‌ಬ್ಯಾಕ್‌ನಲ್ಲಿ ಅವಳ ಹಳೆಯ ಕತೆಯನ್ನು ಹೇಳುತ್ತದೆ. ಫ್ಲ್ಯಾಷ್‌ಬ್ಯಾಕ್ ಈ ಕಾಲದ ತಂತ್ರ ಅಲ್ಲದೇ ಹೋದರೂ ಈ ಚಿತ್ರದಲ್ಲಿ ಕುತೂಹಲ ಕಾಯ್ದುಕೊಳ್ಳಲು ಅದು ನೆರವಿಗೆ ಬಂದಿದೆ.

ಬಾಲಕಿಯ ತುಮುಲಗಳನ್ನು ಅರಿಯುವ ನ್ಯಾಯಮೂರ್ತಿ ಮಾನವೀಯ ಮೂರ್ತಿ. ಗಂಡನನ್ನು ತೊರೆದು ಬಂದ ಅವಳಿಗೆ ನೆಲೆಯನ್ನೂ ಒದಗಿಸಿ, ನ್ಯಾಯವನ್ನೂ ದಕ್ಕಿಸಿಕೊಡಲು ಅವನೂ ಹೋರಾಡುತ್ತಾನೆ. ನ್ಯಾಯಾಲಯದ ಕಲಾಪಗಳು, ನ್ಯಾಯಮೂರ್ತಿಯ ವಿವೇಚನೆ, ಬಾಲ್ಯ ವಿವಾಹ ತಡೆಯುವ ಕಾನೂನೇ ಇಲ್ಲದ ವ್ಯವಸ್ಥೆಯಲ್ಲಿ ವಿವಾಹ ವಿಚ್ಛೇದನ ಕೊಡಿಸಲು ಅನುಸರಿಸುವ ಸಂವಾದದ ಮಾರ್ಗ ಎಲ್ಲದರಲ್ಲೂ ಸಂಯಮ ಹಾಗೂ ಸಹಜತೆ ಇದೆ.

ಸಮಸ್ಯೆಯೇ ಸಿನಿಮಾದ ತಿರುಳು. ಆದ್ದರಿಂದ 'ಕಪ್ಪು–ಬಿಳುಪು' ಧೋರಣೆಯಿಂದ ಚಿತ್ರಕಥೆ ರೂಪಿಸುವುದು ನಿರ್ದೇಶಕಿಗೆ ಅನಿವಾರ್ಯ ಆಗಿದೆ. ಹದವರಿತಂತೆ ಮೆಲೊಡ್ರಾಮಾ ಕೂಡ ಚಿತ್ರದ ಭಾಗವಾಗಿದೆ. ಅದು ಅಪಸವ್ಯ ಆಗದೇ ಇರುವುದು ಮೆಚ್ಚತಕ್ಕ ಅಂಶ.

ಹೋರಾಟದ ದನಿ ಇರಬೇಕಾದದ್ದು ಹೀಗೆ ಸಹಜವಾಗಿಯೇ ಅಲ್ಲವೇ ಎಂಬ ಪ್ರಶ್ನೆಯನ್ನು ಉಳಿಸುವ 'ಐ ಆಮ್ ನೊಜೂಮ್, ಏಜ್ 10 ಅಂಡ್ ಡಿವೋರ್ಸ್ಡ್'ನ ಮುಖ್ಯ ಪಾತ್ರಧಾರಿ ರೆಹಾಮ್ ಮೊಹಮ್ಮದ್‌ಗೂ ಶಹಬ್ಬಾಸ್‌ಗಿರಿ ಸಲ್ಲಬೇಕು. ಮುಗ್ಧ ಕಂಗಳ ಈ ಬಾಲಕಿ ಒಂದಿಷ್ಟು ದಿನಗಳ ಕಾಲ ಅಭಿನಯದ ಮೂಲಕ ಆವರಿಸಿಕೊಂಡುಬಿಡುತ್ತಾಳೆ. ತಾಂತ್ರಿಕವಾಗಿಯೂ ಹದವರಿತ ಕುಶಲತೆಗೆ ಚಿತ್ರದಲ್ಲಿ ಸಾಕ್ಷ್ಯಗಳಿವೆ.

ಚಿತ್ರದ ಕೊನೆಯಲ್ಲಿ ಬಾಲಕಿಯ ಮುಖ ಅರಳುವುದು ಅವಳ ಮನಸ್ಸೂ ಅರಳಿ ನಿಜಕ್ಕೂ ನಕ್ಷತ್ರವನ್ನು ಎಟುಕಿಸಿಕೊಂಡ ಭಾವವನ್ನು ಎಲ್ಲರ ಹೃದಯದಲ್ಲಿಯೂ ಬಿತ್ತುತ್ತದೆ. 96 ನಿಮಿಷಗಳ ಕಾಲ ತನ್ನದೇ ಬೇರುಗಳ ತಡವಿದ ನಿರ್ದೇಶಕಿಯ ಆತ್ಮಕತೆಯ ಪುಟಗಳೂ ಸರಿದುಹೋದಂತಾಗುತ್ತದೆ.